ಸತತವಾಗಿ ಮೂರು ನಾಲ್ಕು ವರ್ಷಗಳಿಂದ ತಾವು ಬೆಳೆಸಿದ ಗೇರು ಕೃಷಿಯನ್ನು ಬಲಾತ್ಕಾರದಿಂದ ಕೊಯ್ಸುಕೊಂಡ ಸದ್ರಿ ಪ್ರಯೋಜನಾರ್ಥಿಗಳಿಗೆ ತುಂಬಲಾರದ ನಷ್ಟವಾಗಿರುವುದನ್ನು, ಅವರಿಗಾದ ನಷ್ಟವನ್ನು ಭರಿಸುವಲ್ಲಿ ಮಾನ್ಯ ಅರಣ್ಯ ಇಲಾಖೆಯು ಸಚಿವರು ಉತ್ತರಿಸುವಿರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಅಧ್ಯಕ್ಷರೇ ಈ ಅತಿಕ್ರಮ ಮಾಡಿಕೊಂಡು ಬೇಸಾಯ ಮಾಡುತ್ತಿರತ್ಕಂಥವರ ಭೂಮಿಯನ್ನು ರೆಗ್ಯುಲರೈಸ್ ಮಾಡುವ ವಿಚಾರದ ಬಗ್ಗೆ ವಿಷಯವನ್ನು ಈ ಜಾಯಿಂಟ್ ಸೆಲೆಕ್ಟ್ ಸಮಿತಿಯಂ ಮುಂದೆ ಇದೆ. ಈಗ ಎರಡು ದಿವಸಗಳಿಂದ ಆ ಸಮಿತಿಯು ಸಭೆ ಸೇರಿ ಕಾರ್ಯಕಲಾಪಗಳನ್ನು ನಡೆಸುತ್ತಿದೆ. ಒಂದು ವಾರದೊಳಗಾಗಿ ಸಮಿತಿಯು ತನ್ನ ವರದಿಯನ್ನು ಸಲ್ಲಿಸುತ್ತದೆ. ಆ ನಂತರ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ವಸಂತ ಬಂಗೇರ.— ಅಧ್ಯಕ್ಷರೇ, ಮಾನ್ಯ ಅರಣ್ಯ ಸಚಿವರು ಕೂಡ ಇದ್ದಾರೆ. ಅರಣ್ಯ ಭೂಮಿಯಲ್ಲಿ ಹಿಂದಿನಿಂದಲೂ ಬೆಳೆಗಳನ್ನು ಬೆಳೆದುಕೊಂಡು ಬಂದವರನ್ನು ಈಗ ಇಲಾಖೆಯವರು ಬಲಾತ್ಕಾರವಾಗಿ ಕೊಂಡೊಯ್ಯುತ್ತಿದ್ದಾರೆ. ಇದು ನಿಲ್ಲ ಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಈ ಬಗ್ಗೆ ಜಾಯಿಂಟ್ ಸೆಲೆಕ್ಟ್ ಸಮಿತಿಯ ಅಭಿಪ್ರಾಯದ ನಂತರ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಈಗಾಗಲೇ ಹೇಳಿದ್ದೇನೆ.

2) ಕರ್ನಾಟಕದಲ್ಲಿ ನ್ಯಾಯಾಂಗ ಇಲಾಖೆಯಲ್ಲಿ ವರ್ಗಾವಣೆಯಾಗಿ ಕೆಲಸ ಮಾಡುವ ಜಿಲ್ಲಾ ಮಂತ್ತು ಇತರ ನ್ಯಾಯಾಧೀಶರವರಿಗೆ ಬಂಗಲೆ ಕಾರು ಮತ್ತಿತರ ಅನುಕೂಲ ಕೊಡುವ ಬಗ್ಗೆ

ಶ್ರೀ ಆರ್. ವೆಂಕಟರಾವಪ್ಪ (ಮಂಗಳಬಾಗಿಲು).— ಕರ್ನಾಟಕದಲ್ಲಿನ ನ್ಯಾಯಾಂಗ ಇಲಾಖೆಯಲ್ಲಿ ಕೆಲಸ ಮಾಡುವ ಜಿಲ್ಲಾ ಮತ್ತು ಇತರ ನ್ಯಾಯಾಧೀಶರನ್ನು ಲೇಬರ್ ಕೋರ್ಟ್ ಮತ್ತು ಲೇಬರ್ ಟ್ರಿಬ್ಯೂನಲ್‌ಗಳಿಗೆ ವರ್ಗಾಯಿಸಿದ್ದಾರೆ. ಅವರಿಗೆ ೬ ತಿಂಗಳ ಒಂದೆರೇ ಸರ್ಕಾರ ಕಾರು, ಬಂಗಲೆ ಮತ್ತಿತರ ಅನುಕೂಲಗಳನ್ನು ಕೊಡುವುದಾಗಿ ಒಪ್ಪಿ ಸರ್ಕಾರಿ ಆದೇಶವನ್ನು ಹೊರಡಿಸಿದ್ದರೂ ಇನ್ನೂ ಕೊಡದೆ ನ್ಯಾಯಾಂಗ ಇಲಾಖೆಯ ಅಧಿಕಾರಿಗಳಿಗೆ ತೊಂದರೆಯಾಗಿರುವುದಲ್ಲದೆ ಲೇಬರ್ ಕೋರ್ಟ್ ಸುಗಮವಾಗಿ ನಡೆಯಲು ತೊಂದರೆಯಾಗಿರುವುದರಿಂದ ಮತ್ತು ಅವರು ನಿರ್ವಹಿಸುತ್ತಿರುವ ಕಾರ್ಯ ಬಹಳ ಜವಾಬ್ದಾರಿಯುತವಾದುದರಿಂದ ಸರ್ಕಾರ ಅವರಿಗೆ ಕೊಟ್ಟಿರುವ ಆದೇಶವನ್ವಯ ಆಜ್ಞೆ ಜಾರಿಗೊಳಿಸಿ, ಅವರಿಗೆ ನ್ಯಾಯಯುತವಾಗಿ ನೀಡಬೇಕಾದ ಅನುಕೂಲತೆಗಳನ್ನು ಕೊಡುವುದರ ಬಗ್ಗೆ ತುರ್ತು ಮಂಜೂರಾತಿ ನೀಡಬೇಕೆಂದು ಕೋರಿ, ಈ ಪ್ರಸ್ತಾವನೆಯನ್ನು ತರಲಿಚ್ಛಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಅಧ್ಯಕ್ಷರೇ, ಈಗಾಗಲೇ ಜ್ಯೂಡಿಷಿಯಲ್ ಆಫೀಸರ್‌ಗಳಿಗೆ ಕಾರು ಕೊಡತಕ್ಕಂಥ ಆಜ್ಞೆಯನ್ನು ಪಾಡಿದೆ. ಅಂತೆಯೇ ಇದನ್ನು ಮಾನ್ಯ ಸದಸ್ಯರು ಹೇಳಿದಂತೆಲೇಬರ್ ಕೋರ್ಟಿನವರಿಗೂ ಕೊಡುವ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ.

3. ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಹೆಂಚಿನ ಕಾರ್ಖಾನೆಗಳಲ್ಲಿ ಅಧಿಕ ಕಾರ್ಮಿಕರು ಮುಷ್ಕರ ನಡೆಸುತ್ತಿರುವ ಬಗ್ಗೆ

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).— ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಹೆಂಚಿನ ಕಾರ್ಖಾನೆಗಳ ಏಳು ಸಾವಿರಕ್ಕೂ ಅಧಿಕ ಕಾರ್ಮಿಕರು ಮುಷ್ಕರ, ಧರಣಿ ನಡೆಸುತ್ತಿದ್ದಾರೆ. ಮಾಲೀಕರಿಗೂ ಕಾರ್ಮಿಕರಿಗೂ ಇರುವ ಬೇಡಿಕೆ. ಈಡೇರಿಕೆಯ ಬಗ್ಗೆ ಇದು ನಡೆಯುತ್ತಿದೆ. ಇಪ್ಪರಲ್ಲಿ ಲಾರಿ ಚಾರ್ಜು ಬಂಧನಗಳೂ ಆದ ವರದಿಗಳಿವೆ. ಹೆಂಚಿನ ಕಾರ್ಮಿಕರ ತಂಟ್ಟಿಭತ್ಯೆ ಸಹಿತ ಕನಿಷ್ಠ ವೇತನದ ಶೇಫ್ಟು ಪ್ರಕಟಣೆಗಾಗಿ ಕೂಡ ಕಾರ್ಮಿಕರು ಒತ್ತಾಯ ತಂದಿರುತ್ತಾರೆ. ಈಗ ದ. ಕನ್ನಡದಲ್ಲಿ ಇದು ವಿಕೋಪಕ್ಕೆ ಹೋಗಿರುತ್ತದೆ, ಈ ಕುರಿತು ಕಾರ್ಮಿಕ ಮತ್ತು ಗೃಹ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ — ಈ ಹೆಂಚಿನ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕರಿಗೆ, ಅವರ ವೇತನದ ಬಗ್ಗೆ ಈಗಾಗಲೇ ನನ್ನ ಹತ್ತಿರ ವರದಿ ಬಂದಿದೆ, ಅದರ ಬಗ್ಗೆ ಎರಡು ದಿವಸಗಳಿಂಳಗಾಗಿ ನೋಟಿಫಿಕೇಶನ್ ಇಶ್ಯೂ ಮಾಡುತ್ತೇವೆ ಮತ್ತು ಅದರ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ನಾರಾಯಣಸ್ವಾಮಿ.— ಗೈರು ಹಾಜರು

4 ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಇನ್ಸ್‌ಟಿಟ್ಯೂಟ್ ಆಫ್ ಕರಸ್ಪಾಂಡೆನ್ಸ್ ಕೋರ್ಸ್ ಕೇಂದ್ರವನ್ನು ಪ್ರಾರಂಭಿಸುವ ಬಗ್ಗೆ

ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).— ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿಯಲ್ಲಿ ಅಂಚೆ ಮತ್ತು ತೆರಪಿನ ಸಂಸ್ಥೆ (ಇನ್ಸ್‌ಟಿಟ್ಯೂಟ್ ಆಫ್ ಕರಸ್ಪಾಂಡೆನ್ಸ್ ಕೋರ್ಸ್ ಅಂಡ್ ಕಂಟಿನ್ಯೂಯಿಂಗ್ ಎಜುಕೇಷನ್‌ಯ ಮೂಲಕ ವಿದ್ಯಾಭ್ಯಾಸವನ್ನು ಮುಂದುವರಿಸುತ್ತಿದ್ದ ವಿದ್ಯಾರ್ಥಿಗಳಿಗಾಗಿ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿಯಲ್ಲಿ ವರ್ಷಕ್ಕೊಮ್ಮೆ ಪ್ರತಿ ವರ್ಷ ಪರೀಕ್ಷೆ ನಡೆಸುತ್ತಿದ್ದು ೧೯೫೫-೬೬ರಿಂದ ಉಡುಪಿ ಪರೀಕ್ಷಾ ಕೇಂದ್ರವನ್ನು ಇದ್ದಕ್ಕಿದ್ದಂತೆ ರದ್ದು ಪಡಿಸಿರುವುದರಿಂದ ತೆರಪಿನ ಶಿಕ್ಷಣವನ್ನು ಮುಂದುವರಿಸುತ್ತಿದ್ದ ಸಾವಿರಾರು ಮಂದಿ ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗಿದೆ. ಆದರೆ ಮೈಸೂರು, ಬೆಂಗಳೂರು, ಶಿವಮೊಗ್ಗ, ದಾವಣಗೆರೆ ಹಾಗೂ ಮದರಾಸಿನ ಪರೀಕ್ಷಾ ಕೇಂದ್ರಗಳನ್ನು ಮುಂದುವರಿಸಲಾಗಿದೆ. ಮೇಲ್ಕಂಡ ನಾಲ್ಕು ಜಿಲ್ಲೆಯ ವಿದ್ಯಾರ್ಥಿಗಳಿಗೆ ಉಡುಪಿ ಕೇಂದ್ರ ಬಹಳ ಅನುಕೂಲವಾಗಿದ್ದು, ಇದನ್ನು ರದ್ದು ಮಾಡಿದ ಕಾರಣವೇನು ಹಾಗೂ ಇದಕ್ಕಾಗಿ ಖಾಲಿ ನಿವೇಶನವೊಂದನ್ನು ಉಡುಪಿಯಲ್ಲಿ ಈಗಾಗಲೇ ಗೊತ್ತು ಮಾಡಲಾಗಿದ್ದು ಅದರ ಸದುಪಯೋಗವನ್ನು ಪಡೆದುಕೊಳ್ಳದೆ ಪರೀಕ್ಷಾ ಕೇಂದ್ರವನ್ನು ರದ್ದು ಮಾಡಿರುವುದರ ಔಚಿತ್ಯವೇನು ? ಅಲ್ಲದೆ, ಸದರಿ ಸಂಸ್ಥೆ ಇಂಗ್ಲೀಷಿನಲ್ಲೇ ಪಠ್ಯ ಕ್ರಮವನ್ನು ಪ್ರಾರಂಭಿಸಿದ್ದು, ಕನ್ನಡವನ್ನು ಕಡೆಗಣಿಸಿರುವುದರಿಂದ ಕನ್ನಡಕ್ಕೆ ಅಪಪ್ರಚಾರ ಮಾಡಿದಂತಾಗಿಲ್ಲವೇ ? ಈ ಬಗ್ಗೆ ಹೇಳಿಕೆ ನೀಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಡಿ. ಮಂಜುನಾಥ್.— ಮಾನ್ಯ ಸದಸ್ಯೆಯವರು ಉಡುಪಿಯಲ್ಲಿ ಸದರಿ ಶಿಕ್ಷಣ ಸಂಸ್ಥೆಯು ನಡೆಸುವ ಪರೀಕ್ಷಾ ಕೇಂದ್ರವನ್ನು ಬಂದು ಮಾಡಿದ್ದು ಪುನಃ ಪ್ರಾರಂಭಿಸುವಂತೆ ಕೇಳಿಕೊಂಡಿದ್ದಾರೆ. ಈ ಬಗ್ಗೆ ನಾನು ಮೈಸೂರು ವಿಶ್ವವಿದ್ಯಾನಿಲಯ ವೈಸ್‌ಚಾನ್ಸ್‌ಲರ್ ಹತ್ತಿರ ಮಾತನಾಡುತ್ತೇನೆ. ಅಲ್ಲಿ ಪರೀಕ್ಷಾಕೇಂದ್ರದ ಅವಶ್ಯಕತೆ ಇದ್ದರೆ ಖಂಡಿತ ಪರೀಕ್ಷಾ ಕೇಂದ್ರವನ್ನು ಮತ್ತೆ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ,

5. ಕಾಪು ಕ್ಷೇತ್ರದ ಪಾಂಗಾಳ ಗ್ರಾಮದ ನಿವಾಸಿ ಶ್ರೀಮತಿ ತುಂಗ ಎಂಬುವರ ಪತಿಗೆ ಸೇರಿದ್ದ ಭೂವಿಲಿಯನ್ನು ಅಕ್ರಮಣ ಮಾಡಿರುವುದರ ಬಗ್ಗೆ

೧೨-೩೫ ಪಿ. ಎಂ.

ಶ್ರೀಮತಿ ವರಂತ ವಿ. ಸಾಲಿಯಾನ್(ಕಾಪು).—ಮಾನ್ಯ ಅಧ್ಯಕ್ಷರೇ,ನನ್ನ ಕಾಪು ಕ್ಷೇತ್ರದ ಪಾಂಗಾಳ ಗ್ರಾಮದ ನಿವಾಸಿ ಹರಿಜನ ಕೋವಿಗೆ ಹಾಗೂ ಜನತಾ ಪಕ್ಷದ ಕಾರ್ಯಕರ್ತೆ ಶ್ರೀಮತಿ ತುಂಗ ಎಂಬುವರ ಪತಿಗೆ ಸೇರಿದ್ದು ಉಡುಪಿ ತಾಲೂಕು ತೆಂಕ ಎರ್ಮಾಳು ಗ್ರಾಮದ ಸರ್ವೆಸಂಖ್ಯೆ ೧೨೨-೨ನೇ ಜಮೀನು ಸುಮಾರು ಎರಡು ಎಕರೆ ಇದ್ದು ೧೨ ವರ್ಷದಿಂದಲೂ ಅವರ ಸ್ವಾಧೀನದಲ್ಲಿದ್ದ ಜಮೀನನ್ನು ಉಡುಪಿಯ ಶ್ರೀ ಗುಂಡುಶೆಟ್ಟಿ ಎಂಬುವರ ಪತ್ನಿ ಶ್ರೀಮತಿ ಲೀಲಾವತಿ ಶೆಡ್ತಿ ಎಂಬಾಕೆ ಅಕ್ರಮಣ ಮಾಡಿದ್ದರಿಂದ ಸದರಿ ಶ್ರೀಮತಿ ತುಂಗ ಇದನ್ನು ಸಂಬಂಧಪಟ್ಟವರ ಗಮನಕ್ಕೆ ತಂದಾಗ್ಯೂ ಯಾವ ಕ್ರಮವನ್ನೂ ಕೈಗೊಳ್ಳದಿದ್ದರಿಂದಾಗಿ ಈಗ ಶ್ರೀಮತಿ ಲೀಲಾವತಿ ಜಮೀನಿನಲ್ಲಿ ಶಿವರ್ ಠಾಣೆಯ ಪೋಲೀಸು ಅಧಿಕಾರಿಗಳ ಸಹಾಯದಿಂದ ಬೇಸಿ ಕಟ್ಟಿಸಿಕೊಂಡಿದ್ದಾರೆ. ಈ ಶ್ರೀಮತಿ ತುಂಗ ಮಂಡಲ ಪಂಚಾಯತಿ ಜನತಾ ಪಕ್ಷದಿಂದ ಸದಸ್ಯೆಯಾಗಿ ಆಯ್ಕೆಯಾಗಿದ್ದು ತನಗಾಗಿರುವ ಅನ್ಯಾಯವನ್ನು